ಸಿ.ಸಿ.ನಂಃ 8064/2018

ಚಾಸಾಃ 11 , ಪ್ರಾಸಾಃ 2

# ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು ನಗರ

ಸಿ.ಸಿ : ಸಿ.ಸಿ.ನಂಃ 8064/2018

ಚಾಸಾಃ 11 , ಪ್ರಾಸಾಃ 2

| | |
|---|---|
| ಸಾಕ್ಷಿದಾರರ ಹೆಸರುಃ | ವೀರಭದ್ರಪ್ಪ |
| ತಂದೆಯ ಹೆಸರುಃ | ಲೇಟ್ ಸಂಗಪ್ಪ |
| ವಯಸ್ಸುಃ | 39 ವರ್ಷ |
| ಉದ್ಯೋಗಃ | ಹೆಚ್.ಸಿ ಹುಳಿಮಾವು ಪೊಲೀಸ್ ಠಾಣೆ |
| ವಾಸಃ | ಜೆ.ಪಿ ನಗರ ಬೆಂಗಳೂರು |

**ದಿನಾಂಕಃ 15-07-2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆ ಹಿರಿಯ ಸ.ಸ.ಅ ಅವರಿಂದಃ-**

1. ನಾನು 2017 ರಿಂದ 2021 ರವರೆಗೆ ಎಸ್.ಜಿ ಪಾಳ್ಯ ಪೊಲೀಸ್ ಠಾಣೆಯಲ್ಲಿ ಪಿ.ಸಿ ಆಗಿ ಕೆಲಸ ಮಾಡಿರುತ್ತೇನೆ.

2. ದಿಃ 21-09-2017 ರಂದು ನಾನು ಹಗಲು ಕರ್ತವ್ಯಕ್ಕೆ ಹಾಜರಾದಾಗ ಠಾಣಾಧಿಕರಿಗಳು ನನಗೂ ಹಾಗೂ ಚಾಸಾ-10 ರವರಿಗೆ ಈ ಪ್ರಕರಣದ ಆರೋಪಿಯನ್ನು ಪತ್ತೆ ಮಾಡಿ ಕರೆ ತರಲು ನಿರ್ದೇಶಿಸಿರುತ್ತಾರೆ. ಅದರಂತೆ ನಾನು ಮತ್ತು ಚಾಸಾ-10 ರವರು ಠಾಣಾ ಸರಹದ್ದಿನಲ್ಲಿ ಗಸ್ತಿನಲ್ಲಿ ಇರುವಾಗ ಬಾತ್ಮಿದಾರರಿಂದ ಬಂದ ಖಚಿತ ಮಾಹಿತಿಯಂತೆ ಮದ್ದೂರಮ್ಮ ಕಾಲೋನಿ ಹತ್ತಿರ

ಹೋಗಿ ಬಾತ್ಮಿದಾರು ದೂರದಿಂದ ತೋರಿಸಿದ ಆರೋಪಿಯನ್ನು ಹಿಡಿದು ಹೆಸರು ಮತ್ತು ವಿಳಾಸ ಕೇಳಲಾಗಿ ಆತನು ತನ್ನ ಹೆಸರನ್ನು ಹೇಮಂತ್ ತಂದೆ ಸಿದ್ದರಾಜು, 20 ವರ್ಷ, ಬಿಟಿಎಂ ಲೇಔಟ್, 1ನೇ ಹಂತ ಎಂದು ತಿಳಿಸಿರುತ್ತಾನೆ. ಆತನನ್ನು ಹಿಡಿದುಕೊಂಡು ಮಧ್ಯಾಹ್ನ 12.30 ಕ್ಕೆ ಠಾಣೆಗೆ ಹಾಜರಾಗಿ ಠಾಣಾಧಿಕಾರಿಗಳ ಮುಂದೆ ಹಾಜರುಪಡಿಸಿರುತ್ತೇನೆ. ವರದಿಯನ್ನು ಚಾಸಾ-10 ರವರು ಮೇಲಾಧಿಕಾರಿಗಳಿಗೆ ನೀಡಿರುತ್ತಾರೆ. ನಾನು ಹೇಳಿಕೆ ಮಾತ್ರ ನೀಡಿರುತ್ತೇನೆ. ಆರೋಪಿಯನ್ನು ನಾನು ಗುರುತಿಸಬಲ್ಲೆ. (ಆರೋಪಿಯ ಗುರುತನ್ನು ವಿವಾಧಿಸುವುದಿಲ್ಲವೆಂದು ಆರೋಪಿತರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿರುತ್ತಾರೆ.)

**ಪಾಟೀಸವಾಲು ಆರೋಪಿ ಪರ ವಕೀಲರಿಂದಃ –**

3. ಹಗಲು ಕರ್ತವ್ಯಕ್ಕೆ ಬೆಳಗ್ಗೆ 8.30 ಗಂಟೆಗೆ ಕರ್ತವ್ಯಕ್ಕೆ ಹಾಜರಾಗಿರುತ್ತೇನೆ. ಆ ಸಮಯದಲ್ಲಿ ಠಾಣೆಯಲ್ಲಿ ಇತರೆ ಸಿಬ್ಬಂದಿ ಇದ್ದರು. ಆದರೆ ಠಾಣಾಧಿಕಾರಿಗಳು ನನಗೆ ಮತ್ತು ಚಾಸಾ-10 ರವರಿಗೆ ಆರೋಪಿಯನ್ನು ಪತ್ತೆ ಹಚ್ಚುವಂತೆ ನಿರ್ದೇಶಿಸಿರುತ್ತಾರೆ. ನಾನು ಮತ್ತು ಚಾಸಾ-10 ರವರು ಆರೋಪಿ ಪತ್ತೆ ಕರ್ತವ್ಯಕ್ಕೆ ಹೋಗಿಲ್ಲ ಮತ್ತು ಆರೋಪಿಯನ್ನು ಹಿಡಿದು ಠಾಣಾಧಿಕಾರಿಗಳ ಮುಂದೆ

ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳಿಗೆ ಸಹಾಯ ಮಾಡಲು ಸುಳ್ಳು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

(ರಂಗೇಗೌಡ ಸಿ)

ಮು. ಮ. ದಂ. ನ್ಯಾ ಬೆಂ. ನಗರ.